ಇನ್ನೊಂದೆರಡು ಕೈಕಾಲುಗಳನ್ನಾದರೂ ದೇವರು ಕೊಟ್ಟಿದ್ದಿದ್ದರೆ ಅನುಕೂಲವಾಗುತ್ತಿತ್ತು. ಮಲಗುವ ಹೊತ್ತಿಗೆ ಇವರು ಹೇಳುವ ನಾಗರಿಕ ಬದುಕಿನ ಕಥೆಗಳೂ ಅಂಥದ್ದೇ. ಏನೇನೋ ಕೆಟ್ಟ ಕನಸು ಬಿದ್ದು ನಿನ್ನೆ ರಾತ್ರಿಯ ನಿದ್ರೆ ಸರಿಯಾಗಿಲ್ಲ. ಹಾಗಂತ ಬೆಳಗಿನ ಝಾವಕ್ಕೆ ಜೋರು ನಿದ್ದೆ. ಬಿಡಿ, ಇದೆಲ್ಲ ಮುಗಿಯುವ ರಾಮಾಯಣವೇ ಅಲ್ಲ.



**ಅಲಕಾ ಕಟ್ಟೆಮನೆ**

ಎಲ್ಲ ಕೆಲಸಗಳನ್ನು ಮುಗಿಸಿ, ಕಾರು ಹತ್ತಿ ಕೀ ತಿರುಪಿದಾಗ 'ಉಶ್ಯಪ್ಪಾ' ಎನ್ನುವಂತಾಗಿತ್ತು. ನನ್ನ ಆಫೀಸೇನೂ ದೂರವಿಲ್ಲ. 20 ನಿಮಿಷಗಳ ಹಾದಿ. ಗೇಟು ದಾಟುತ್ತಿದ್ದಂತೆ ಫಕ್ಕನೆ ಉಮಾ ನೆನಪಾದಳು. ನಮ್ಮ ಆಫೀಸಿನ ಅಕೌಂಟ್ಸ್ ವಿಭಾಗದಲ್ಲಿರುವ ಹುಡುಗಿ. ಕಳೆದ ವರ್ಷವಷ್ಟೇ ಸೇರಿದವಳು. ಆದರೆ ಚುರುಕಾಗಿ ಎಲ್ಲ ಕೆಲಸ ಕಲಿತಿದ್ದಾಳೆ. ನಮ್ಮ ವಿಭಾಗದ ಬಿಲ್ಲೊಂದು ಪಾಸಾಗದೆ ಕೂತಿದೆ. ಏನಾಯ್ತು ಅನ್ನುವುದನ್ನ ಅಕೌಂಟ್ಸ್‌ನಲ್ಲಿ ಮೊದಲು ವಿಚಾರಿಸಬೇಕು. ಇದಕ್ಕೆಲ್ಲಾ ಉಮಾನೆ ಸರಿ, ಬೇಕಷ್ಟಕ್ಕೇ ಮಾತು ಅವಳದ್ದು. ಅಲ್ಲಿನ ಉಳಿದವರ ಬಾಯಿ ತೀರಾ ಉದ್ದ, ಮೇಲಿಂದ ಅಧಿಕಪ್ರಸಂಗಿ! ಸದ್ಯ, ಹಸಿರು ದೀಪ ಬಂತು. ಇವತ್ತು ಸಿಗ್ನಲ್‌ನಲ್ಲಿ ಹೆಚ್ಚು ಹೊತ್ತು ನಿಲ್ಲುವಂತಾಗಲಿಲ್ಲ. ಆಫೀಸಿಗೆ ಹೋದ ತಕ್ಷಣ... ಅರೆ! ಅರೆರೆರೆ! ಏಯ್!

ಏನಾಯ್ತು ಎಂದು ಅರ್ಥವಾಗುವ ಹೊತ್ತಿಗೆ ಸಿಗ್ನಲ್‌ನಲ್ಲೇ ಆ ಮುದುಕಿ ಬಂದು ನನ್ನ ಕಾರಿಗೆ ತಾಗಿಕೊಂಡು ಬಿದ್ದಾಗಿತ್ತು. ಛೇ! ಇದೇನು ಹೀಗಾಯ್ತಲ್ಲ! ಗಾಡಿ ಪಕ್ಕಕ್ಕೆ ಹಾಕಿ, ಹೋಗಿ ಆ ವೃದ್ಧೆಯನ್ನು ಎತ್ತುವಷ್ಟರಲ್ಲೇ ಸುತ್ತಲೊಂದಿಷ್ಟು ಜನ ಜಮಾಯಿಸಿದ್ದರು. 'ನೋಡಿ ಸರ್‍ಯಾಗಿ. ಕಾಲು ಮುರ್ದೋಗಿರ್ಬೇಕು, ಕೈ ಕಿತ್ತೋಗಿರ್ಬೇಕು, ಮುಖ ವಡದೋಯ್ತಾ? ನೀರ್ರೈತಾ... ಕೊಡಿ' ಎಂದೆನ್ನುತ್ತಾ ಮುತ್ತಿಕೊಂಡಿದ್ದರು. ಪುಣ್ಯ(ಯಾರದ್ದಾದ್ರೂ ಇರಲಿ)! ಅಜ್ಜಿಗೆ ಏನೂ ಆಗಿರಲಿಲ್ಲ. ಮೊಣಕೈಗೆ ತೀರಾ ಪುಟ್ಟದೊಂದು ತರಚಿದ ಗಾಯವಾಗಿತ್ತು. ಇಷ್ಟು ವರ್ಷಗಳಲ್ಲಿ ಯಾರಿಗೂ ಅಪಾಯ ಮಾಡದಂತೆ ಜಾಗ್ರತೆಯಿಂದ ಗಾಡಿ ಓಡಿಸಿದ್ದ ನನಗೇನಾಯಿತು ಎಂದು ನನ್ನಷ್ಟಕ್ಕೆ ಪಿಚ್ಚೆನಿಸಿತು. 'ಆಸ್ಪೆಟ್ಲು, ಪೊಲೀಸು... ಈ ಆಂಟಿಗೋಳು ಅದೇನ್ ಕಾರೋಡಿಸ್ತಾರೊ! ವಸಿ ನೋಡ್ಕೊಂಡೋಗದಲ್ವಾ? ಹಿಂಗಾದ್ರೆ ರಸ್ತೆ ಮೇಲೆ ಎಂಗೋಡಾಡದು?' ಎಂದೆಲ್ಲಾ ತಲೆಗೊಂದು ಮಾತಾಡುತ್ತಿದ್ದರು ಸೇರಿದ ಜನ. ಅರೆ! ಇಷ್ಟೊಂದು ಜನಕ್ಕೆ ಬೆಳ್ಳಂಬೆಳಗ್ಗೆ ಬೀದಿ ಪಂಚಾಯ್ತಿ ಬಿಟ್ಟು ಬೇರೆ ಕೆಲಸವಿಲ್ಲವೆ? ಅವರನ್ನೆಲ್ಲಾ ಗದರಿಸಿ ಚದುರಿಸಿ, ಅಜ್ಜಿಯನ್ನು ರಸ್ತೆಯ ಬದಿಗೆ ಕರೆತಂದು ನೀರು ಕುಡಿಯಲು ಕೊಟ್ಟೆ. ಆಕೆಗೆ ಪೆಟ್ಟೇನೂ ಆಗದಿರುವುದನ್ನು ಖಾತ್ರಿ ಪಡಿಸಿಕೊಳ್ಳುತ್ತಾ, 'ಎಲ್ಲಿಗೋಗ್ಬೇಕು ಅಜ್ಜಿ?' ಕೇಳಿದೆ. ಗಾಬರಿಯಿಂದ ಗಡಗಡ ನಡುಗುತ್ತಿದ್ದ ಅಜ್ಜಿ, 'ತ್ರಿನೇತ್ರ ಸರ್ಕೋಲು ತಾವು ಬುಡವ್ವಾ ನನ್ನ. ವಸಿ ಜ್ವಾಪಾನ್ಕೆ ಗಾಡಿ ಬುಡು' ಎನ್ನುತ್ತಾ ಕಾರೊಳ ಹೊಕ್ಕು ಕುಳಿತಿತು. ಆದರೂ ಅದ್ಯಾವ ಮಾಯಕದಿಂದ ಈ ಅಜ್ಜಿ ಕಾರಿಗೆ ಅಡ್ಡಬಂತು? ನನ್ನ ಎಡಗಡೆಗೆ ಇದ್ದ ವಾಹನಗಳ ಸಾಲನ್ನು ಅದ್ಹೇಗೆ ದಾಟಿಬಂತು ಎಂದು ಸೋಜಿಗ ಪಡುತ್ತಾ ಕಾರು ತಿರುಗಿಸಿದೆ.

ತ್ರಿನೇತ್ರ ಸರ್ಕಲ್ ಬಳಿ ಕಾರು ನಿಲ್ಲಿಸುತ್ತಿದ್ದಂತೆಯೇ ಈ ಅಜ್ಜಿಗಿಂತ ವಯಸ್ಸಾದ ಅಜ್ಜನೊಬ್ಬ ಬಳಿ ಬಂದ. ಆತನನ್ನು ಕಾಣುತ್ತಿದ್ದಂತೆಯೇ, 'ಏನೊ, ನನ್ನ ಪುಣ್ಯ ಬದೀಕಂಡೆ. ಇಲ್ದೇ ವೋದ್ರೆ ಈ ಉಡುಗಿ ನನ್ನ ವ್ಯಾಕೆ ಗಾಡಿ ಬುಡ್ಬುಟಿತ್ತು. ಯಾರ್ಮಕ ನೋಡಿ ಎದ್ನೋ' ಎನ್ನುತ್ತಾ ಗೋಳೋ